DAY & DATE: WEDNESDAY, OCTOBER 28th, 2026

Matter: BNMIT is Launching Centre of Excellence in Innovation in Deeptech & Clean Energy in association with GreenH2 India & New Energy Opportunities Limited (NEO) Australia

As appeared in the Newspapers:

SAMYUKTA KARNATAKA
(Bengaluru, Page No. 02)

ಬಿಎನ್‌ಎಂಐಟಿಯಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಇನೋವೇಷನ್ ಶುರು



ಬೆಂಗಳೂರು: ಬಿಎನ್‌ಎಂಐಟಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎನ್‌ಎಂಐಟಿ), ಗ್ರೀನ್‌ಎಚ್2 ಇಂಡಿಯಾ ಮತ್ತು ಹೊಸ ಇಂಧನ ಅವಕಾಶಗಳ ಕಂಪನಿ (ನಿಯೋ) ಜೊತೆಗೂಡಿ ತನ್ನ ಕ್ಯಾಂಪಸ್‌ನಲ್ಲಿ 'ಡೀಪ್‌ಟೆಕ್ ಮತ್ತು ಕ್ಲೀನ್ ಎನರ್ಜಿ ಕ್ಷೇತ್ರದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಇನೋವೇಷನ್" ಅನ್ನು ತೆರೆದಿದೆ. ಈ ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಗ್ರೀನ್‌ಎಚ್2 ಇಂಡಿಯಾ ಕಂಪನಿಯ ಸಿಇಒ ಜಯ್ ಸಿನ್ಹಾ, ಬಿಎನ್‌ಎಂಐಟಿಯ ಅಧ್ಯಕ್ಷರಾದ ನಾರಾಯಣ ರಾವ್ ಆರ್.ಮಾನೆ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಗ್ರೀನ್‌ಎಚ್2 ಇಂಡಿಯಾ ಕಂಪನಿಯ ಸಿಇಒ ಜಯ್ ಸಿನ್ಹಾ, ದೇಶದಲ್ಲಿ ಕ್ಲೀನ್ ಎನರ್ಜಿ ಮತ್ತು ಡೀಪ್ ಟೆಕ್ ಬಗ್ಗೆ ಹಲವಾರು ಸಂಶೋಧನೆಗಳು ಪ್ರಗತಿಯಲ್ಲಿವೆ. ನಾವು ಈ ಕ್ಷೇತ್ರದ ಬಗ್ಗೆ ಸಂಶೋಧನೆಯನ್ನು ಕೈಗೆತ್ತುಕೊಳ್ಳುವುದಕ್ಕೆ ಪ್ರೋತ್ಸಾಹಿಸುವ ಸಲುವಾಗಿ ಈ ಕಾಲೇಜಿನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರವನ್ನು ತೆರೆದಿದ್ದೇವೆ. ಇದರಿಂದ ವಿದ್ಯಾರ್ಥಿಗಳು ಮತ್ತು ಬೋಧಕರು ಹೆಚ್ಚು ಸಂಶೋಧನೆ ನಡೆಸಬಹುದು ಎಂದರು. ಈ ವೇಳೆ ಆಲಾಯ್ ಪಾರ್ಟನರ್ ಸಿಇಒ ಎಲಿಯಟ್ ಪಾರ್ಕರ್, ಕ್ಲಾಸಿಕ್ ಟೆಕ್ನಾಲಜಿಯ ಉಪಾಧ್ಯಕ್ಷ ಅಕಿರಾ ತನಕ, ಗ್ರಫೈನ್ ಇನೋವೇಷನ್ ಮಾಚಿಸ್ಟರ್‌ನ ಸಿಇಒ ಡಾ. ವಿವೇಕ್ ಕೊಂಚೆರಿ, ಬಿಎನ್‌ಎಂಐಟಿಯ ಅಧ್ಯಕ್ಷರಾದ ನಾರಾಯಣ ರಾವ್ ಆರ್.ಮಾನೆ ಹಾಗೂ ಮತ್ತಿತರರು ಇದ್ದರು.